# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.1462/2024

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | ಎಸ್ ಡಿ ಚಂದ್ರಪ್ಪ | ಚಾಸಾಃ **8** | ಪ್ರಾಸಾಃ **3** |
| **ತಂದೆಯ ಹೆಸರು** | ದೇವೇಂದ್ರಪ್ಪ | | |
| **ವಯಸ್ಸು** | 61 ವರ್ಷ | | |
| **ವೃತ್ತಿ** | ನಿವೃತ್ತ ಅಬಕಾರಿ ಉಪನಿರೀಕ್ಷಕರು | | |
| **ವಾಸಸ್ಥಳ** | ಶಿವಮೊಗ್ಗ | | |

ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ನಾನು ದಿಃ 02-02-2024 ರಿಂದ ದಿಃ10-06-2024 ರವರೆಗೆ ಹೊನ್ನಾಳಿ ವಲಯದಲ್ಲಿ ಅಬಕಾರಿ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿಃ 05-05-2024 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ದಿಃ 07-05-2024 ರಂದು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ಚಾಸಾ-6 ರವರ ಮುಖಾಂತರ ನಿವೇದನೆ ಮೂಲಕ ಚಾಸಾ-7 ರವರಿಗೆ ಕಳುಹಿಸಿಕೊಟ್ಟಿದ್ದು, ದಿಃ 14-05-2024 ರಂದು ರಾಸಾಯನಿಕ ವರದಿಯನ್ನು ಚಾಸಾ-7 ರವರಿಂದ ಚಾಸಾ-6 ರವರು ಪಡೆದುಕೊಂಡು ಬಂದು ಹಾಜರುಪಡಿಸಿದ್ದರು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ.

ಚಾಸಾ-7 ರವರಿಗೆ ನೀಡಿದ ನಿವೇದನೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ರಾಸಾಯನಿಕ ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-

ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ಚಾಸಾ-6 ರವರ ಮುಖಾಂತರ ನಿವೇದನೆ ಮೂಲಕ ಚಾಸಾ-7 ರವರಿಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ರಾಸಾಯನಿಕ ವರದಿಯನ್ನು ಚಾಸಾ-7 ರವರಿಂದ ಚಾಸಾ-6 ರವರು ಪಡೆದುಕೊಂಡು ಬಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.